# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

S.C.69/2021

C.W.4
P.W. 5

<u>ದಿನಾಂಕಃ 24-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

| | |
|---|---|
| ಹೆಸರು | ಃ ಮುನಾವರ್ ಪಾಷ |
| ತಂದೆಯ ಹೆಸರು | ಃ ಪಾಷ ಮೊಹಿದ್ದೀನ್ |
| ವಯಸ್ಸು | ಃ 58 ವರ್ಷ |
| ಉದ್ಯೋಗ | ಃ ಎ ಐ ಓ , ರಾಜ್ಯ ಗುಪ್ತ ವಾರ್ತೆ , |
| ವಾಸ | ಃ ಭೀಮಸಂದ್ರ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಈ ಹಿಂದೆ 2013 ರಿಂದ ತಿಲಕ್ ಪಾರ್ಕ್ ಸಿಪಿಐ ರವರ ಕ್ರೈಂ ಸ್ವಾಡ್ ನಲ್ಲಿ ಮುಖ್ಯಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೆ.

2) ದಿ 06-12-2020 ರಂದು ಹೊಸ ಬಡಾವಣೆಯ ಪೊಲೀಸ್ ಠಾಣೆಯ ಮೊಕದ್ದಮೆ ನಂ.39/2020 ಕಲಂ. 399, 402 IPC and 91/2020 ಕಲಂ 302 IPC ಕೇಸಿನ ಆರೋಪಿಗಳ ಪತ್ತೆಗೆ ತಂಡವನ್ನು ರಚಿಸಿದ್ದು, ಪಿ ಎಸ್ ಐ ತಿಲಕ್ ಪಾರ್ಕ್ ಎ ಎಸ್ ಐ ಪರಮೇಶ್ವರ್ , ಹೆಚ್ ಸಿ ಸೈಮನ್ ವಿಕ್ಟರ್ ಹಾಗೂ ನಾನು ತಂಡದಲ್ಲಿ ಇದ್ದೇನು. ಆ ದಿನ ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆಯ ಸರಹದ್ದಿನ

ಅಜ್ಜಪ್ಪನಹಳ್ಳಿ ಇಲ್ಲಿ ಆರೋಪಿ ವಿಕಾಸ್ ಇರುವುದಾಗಿ ಪಿ ಎಸ್ ಐ ರವರಿಗೆ ಮಾಹಿತಿ ಬಂದಿದ್ದು, ಮಾಹಿತಿಯಂತೆ ಆ ದಿನ ಬೆಳಗಿನ ಜಾವ 5 ಗಂಟೆಗೆ ಅಜ್ಜಪ್ಪನ ಹಳ್ಳಿ ಗೆ ಹೋದೆವು. ಅಲ್ಲಿ ಅಂಜನೇಯ ಸ್ವಾಮಿ ದೇವಸ್ಥಾನದ ಬಳಿ ನಿರ್ಮಾಣದ ಹಂತದಲ್ಲಿರುವ ಇರುವ ಸಮುದಾಯ ಭವನಕ್ಕೆ ಕಿಟಕಿ ಮತ್ತು ಬಾಗಿಲುಗಳು ಇರಲಿಲ್ಲ , ಸಮುದಾಯ ಭವನದ ಹತ್ತಿರಕ್ಕೆ ಹೋಗುತ್ತಿರುವಾಗ ವಿಕಾಸ್ ಸಮವಸ್ತ್ರದಲ್ಲಿ ಇದ್ದ ಪಿ ಎಸ್ ಐ ರವರನ್ನು ಕಂಡು ಬೆಟ್ಟದ ಕಡೆಗೆ ಓಡಲು ಪ್ರಾರಂಭಿಸಿದನು. ಆಗ ನಾವುಗಳು ಆತನನ್ನು ಬೆನ್ನಟ್ಟಿ ಹಿಡಿಯಲು ಹೋದೆವು. ವಿಕಾಸ್ ತನ್ನ ಬಳಿಯಲ್ಲಿ ಇದ್ದ ಡ್ಯಾಗ್ರರ್ ನಿಂದ ಪರಮೇಶ್ವರ್ ರವರಿಗೆ ಬಿಸಿ ಹಲ್ಲೆ ಮಾಡಿ ರಕ್ತಗಾಯಪಡಿಸಿದರು. ನಂತರ ಸೈಮನ್ ವಿಕ್ಟರ್ ರವರ ಮೇಲೆ ಡ್ಯಾಗ್ರರ್ ನ್ನು ಬೀಸಲು ಬಂದಾಗ ಪಿ ಎಸ್ ಐ ರವರು ವಿಕಾಸ್ ಗೆ 2-3 ಭಾರಿ ವಾರ್ನ್ ಮಾಡಿ ಶರಣಾಗುವಂತೆ ತಿಳಿಸಿದರು. ಆದರೂ ಸಹ ವಿಕಾಸ್ ರವರು ಕೇಳದೆ ಹಲ್ಲೆ ಮಾಡಲು ಮುಂದಾದನು, ಆಗ ಪಿ ಎಸ್ ಐ ರವರು ಗಾಳಿಯಲ್ಲಿ ಗುಂಡು ಹಾರಿಸಿ ವಾರ್ನ್ ಮಾಡಿದರು, ಆತ ಸೈಮನ್ ವಿಕ್ಟರ್ ಮೇಲೆ ಪುನಃ ಹಲ್ಲೆ ಮಾಡಲು ಪ್ರಯತ್ನಿಸಿದನು, ಆಗ ಪಿ ಎಸ್ ಐ ರವರು ಆತ್ಮರಕ್ಷಣೆಗೋಸ್ಕರ ಆತನ ಕಾಲಿಗೆ ಗುಂಡು ಹಾರಿಸಿದರು. ಆಗ ನಾನು ಅಲ್ಲಿಗೆ ಹೋಗಿ ವಿಕಾಸ್ ನನ್ನು ನೋಡಿದಾಗ ಆತನ ಎಡಗಾಲಿಗೆ ಗುಂಡು ತಾಕಿ ರಕ್ತಗಾಯವಾಗಿತ್ತು ಹಾಗೂ ಎ ಎಸ್ ಐ ಪರಮೇಶ್ವರ್ ರವರ ಎಡರೆಟ್ಟೆಗೆ ರಕ್ತಗಾಯವಾಗಿದ್ದು, ವಿಕಾಸ್ ನನ್ನು ನಾವು ತೆಗೆದುಕೊಂಡು ಹೋಗಿದ್ದ ಪೊಲೀಸ್ ಜೀಪ್ ಕೆಎ-64-ಜಿ-0333 ವಾಹನದಲ್ಲಿ ಮಧ್ಯದಲ್ಲಿ

ಕುಳಿರಿಸಿಕೊಂಡು ಎಡಗಡೆ ನಾನು ಕುಳಿತುಕೊಂಡೆ , ಬಲಗಡೆ ಪಿ ಎಸ್ ಐ ರವರು ಕುಳಿತುಕೊಂಡರು ಹಾಗೂ ಸೈಮನ್ ಹಾಗೂ ಪರಮೇಶ್ವರ್ ರವರು ಹಿಂದುಗಡೆ ಕುಳಿತುಕೊಂಡರು. ಪಿ ಎಸ್ ಐ ರವರು ವಿಕಾಸ್ ಅಲಿಯಾಸ್ ವಿಕ್ಕಿಯನ್ನು ವಿಚಾರಿಸಲಾಗಿ ವಿಕಾಸ್ ಬಿನ್ ಕೃಷ್ಣಮೂರ್ತಿ , ವಾಜರಹಳ್ಳಿ, ನೆಲಮಂಗಲ ಟೌನ್ ಎಂದು ತಿಳಿಸಿದನು. ನಾವು ಈ ಹಿಂದೆ ಗಂಗೋತ್ರಿ ನಗರದ ಮಂಜುಶ್ರೀ ವೈನ್ಸ್ ಬಳಿಯಲ್ಲಿ ಮಂಜುನಾಥ್ ಎಂಬುವರಿಗೆ ಚಾಕುವಿನಿಂದ ತಿವಿದು ಕೊಲೆ ಮಾಡಿರುವುದಾಗಿ ತಿಳಿಸಿದನು. ಈ ವಿಷಯವನ್ನು ಪಿ ಎಸ್ ಐ ರವರು ಸಿಪಿಐ ತಿಲಕ್ ಪಾರ್ಕ್ ಪೊಲೀಸ್ ರವರಿಗೆ ದೂರವಾಣಿಯ ಮೂಲಕ ತಿಳಿಸಿದರು. ನಾವು ಯಲ್ಲಾಪುರದ ಮುಖ್ಯರಸ್ತೆಯಲ್ಲಿ ಬರುವಾಗ ಬಸ್ ಸ್ಟಾಪ್ ಬಳಿ ಸಿಪಿಐ ರವರು ಎದುರುಗಡೆಯಿಂದ ಜೀಪ್ ನಲ್ಲಿ ಬಂದರು, ಸಿಪಿಐ ರವರ ಜೀಪಿನಲ್ಲಿ ಸೈಮನ್ ಹಾಗೂ ಪರಮೇಶ್ವರ್ ರವರನ್ನು ಕೂರಿಸಿ ನಾವುಗಳು ವಿಕಾಸ್ ನನ್ನು ತುಮಕೂರು ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ತಂದು ದಾಖಲಿಸಿದೆವು. ನಂತರ ಪಿ ಎಸ್ ಐ ರವರು ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲು ಮಾಡಿದರು. ಸಾಕ್ಷಿಯು ನ್ಯಾಯಾಲಯದ ಮುಂದೆ ವಿಸಿ ಮೂಲಕ ಹಾಜರುಪಡಿಸಿದ ಆರೋಪಿ ವಿಕಾಸ್ ನನ್ನು ನೋಡಿ ಗುರುತಿಸಿರುತ್ತಾರೆ. ನಾನು ಈ ಸಂಬಂದ ತನಿಖಾಧಿಕಾರಿಗಳ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಇದರಿಂದಾಗಿ ನಾವು ನಿರ್ವಹಿಸುತ್ತಿದ್ದ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಉಂಟಾಗಿರುತ್ತದೆ. ಕೊಲೆ ಮಾಡುವ ಉದ್ದೇಶದಿಂದ ಆರೋಪಿಯು ಈ ರೀತಿ ಕರ್ತವ್ಯಕ್ಕೆ ಅಡ್ಡಿಪಡಿಸಿ ಹಲ್ಲೆ ಮಾಡಿರುತ್ತಾನೆ. ಸಾಕ್ಷಿಯು

ಆದಿನ ಆರೋಪಿ ಕೊಲೆ ಮಾಡುವ ಉದ್ದೇಶದಿಂದ ಕರ್ತವ್ಯದ ಮೇಲೆ ಇದ್ದ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಲು ಬಳಸಿದ ಎಂಓ -5 ಡ್ಯಾಗ್ರ್ರ್ ನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಎಲ್ ಆರ್ ಆರ್ ವಕೀಲರಿಂದಃ

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
ತುಮಕೂರು